152 ಶೀ ೭ ನಿ:72 (104)
4RR
1310

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಛಲವಾದಿ ನಾರಾಯಣಸ್ವಾಮಿ ಇವರು ನಿಯಮ 72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಹೇಳಿಕೆ**

**ಸೂಚನೆ:-**

ಬೆಂಗಳೂರು ಉತ್ತರ ತಾಲ್ಲೂಕು ಯಲಹಂಕ ಹೋಬಳಿ ವೆಂಕಟಾಲ ಗ್ರಾಮ ಸರ್ವೆ ನಂ. 34/2 ಒಟ್ಟು ವಿಸ್ತೀರ್ಣ 2.26 ರಲ್ಲಿ ರೈತರಿಗೆ ಹಾಗೂ ಜಾನುವಾರುಗಳಿಗೆ ಓಡಾಡಲು ರಸ್ತೆ ಸೌಕರ್ಯ ಕಲ್ಪಿಸದಿರುವ ಬಗ್ಗೆ ಮತ್ತು ಬಫರ್ ಜೋನ್ ಏರಿಯಾ ಕುರಿತು ಗುರುತಿಸಿ ಅಲ್ಲಿ ಅಕ್ರಮ ಕಟ್ಟಡ ನಿಯಮಬಾಹಿರ ಕಟ್ಟಡ ತಲೆಎತ್ತದಂತೆ ತಡೆಗಟ್ಟುವ ಬಗ್ಗೆ ಬಫರ್ ಜೋನ್ ಮಾಹಿತಿ ಸ್ಪಷ್ಟೀಕರಿಸುವ ವಿಚಾರದಲ್ಲಿ ಹಾಗೂ ಸದರಿ ಸರ್ವೆ ನಂ. ಜಾಗವು ಯಾರ ಹೆಸರಿನಲ್ಲಿದೆ ಮತ್ತು ಸದರಿ ಜಾಗವು ಬೇರೆಯವರಿಂದ ಜಿ.ಪಿ.ಎ. ನೋಂದಣಿ ಆಗಿರುವ ಬಗ್ಗೆ ಅವರ ವಿವರಗಳ ಕುರಿತು ಮಾನ್ಯ ಕಂದಾಯ ಸಚಿವರ ಗಮನ ಸೆಳೆಯ ಬಯಸುತ್ತೇನೆ.

* * * *

**ಹೇಳಿಕೆ:-**

ಯಲಹಂಕ ಹೋಬಳಿ, ವೆಂಕಟಾಲ ಗ್ರಾಮದ ಸರ್ವೆ ನಂ.34 ರಲ್ಲಿ ಒಟ್ಟು ವಿಸ್ತೀರ್ಣ 2.26 ಎ/ಗುಂಟೆ ಜಮೀನಿನ ಆಕಾರ್ ಬಂದ್‌ನಂತೆ 0-02 ಗುಂಟೆ ಖರಾಬು ಜಾತ ಉಳಿಕೆ 2-24 ಎ/ಗುಂಟೆ ಇರುತ್ತದೆ. ಈ ಜಮೀನಿಗೆ ಸಂಬಂಧಿಸಿದಂತೆ ಗ್ರಾಮ ನಕಾಶೆಯಲ್ಲಿ ಯಾವುದೇ ಬಂಡಿದಾರಿ ಇರುವುದಿಲ್ಲ.

ಯಲಹಂಕ ಕೆರೆಗೆ ಹೊಂದಿಕೊಂಡಿರುವಂತಹ ಜಮೀನಾಗಿದ್ದು, ಸದರಿ ಜಮೀನಿಗೆ ರಸ್ತೆ/ಬಫರ್ ಜೋನ್/ಕಟ್ಟಡ ನಿರ್ಮಾಣದ ಬಗ್ಗೆ ಸ್ಥಳೀಯ ಪ್ರಾಧಿಕಾರದವರು ಕ್ರಮವಹಿಸಬೇಕಾಗಿರುತ್ತದೆ. ಹಾಲಿ ಸರ್ವೆ ನಂ.34 ಪೋಡಿಯಾಗಿ ಹೊಸ ಸರ್ವೆ ನಂ.34/1 ಮತ್ತು 34/2 ಆಗಿದ್ದು, ಸರ್ವೆ ನಂ.34/2 ರಲ್ಲಿ ಪಹಣಿಯಂತೆ ಒಟ್ಟು ವಿಸ್ತೀರ್ಣ 2-07.08 ಎ/ಗುಂಟೆ ಪೈಕಿ 0-01.08 ಗುಂಟೆ ಖರಾಬು ಜಾತ 2-06 ಎ/ಗುಂಟೆ ಇದ್ದು, ಕಾಲಂ 9 ರಲ್ಲಿ ವೈ.ಜಿ ನಿರ್ಮಲ, ವೈ.ಜಿ. ಪುರುಷೋತ್ತಮ, ವೈ.ಜಿ ಯಶೋಧ, ವೈ.ಜಿ. ಮುರಳಿ ಪಾಟೀಲ್ ರವರ ಹೆಸರಿನಲ್ಲಿ ಜಂಟಿಯಾಗಿ ಖಾತೆ ದಾಖಲಾಗಿರುತ್ತದೆ.

ಯಲಹಂಕ ಹೋಬಳಿ, ವೆಂಕಟಾಲ ಗ್ರಾಮದ ಸರ್ವೆ ನಂ.34/2 ರ ಮೂಲ ದಾಖಲೆಗಳನ್ವಯ ಸದರಿ ಸರ್ವೆ ನಂಬರಿನಲ್ಲಿ 0-01.08 ಗುಂಟೆ ಕಾಲುವೆ ಬಗ್ಗೆ ಖರಾಬು ದಾಖಲಾಗಿರುವುದು ಕಂಡುಬರುತ್ತದೆ. ನಕ್ಷೆಯಲ್ಲಿ ಗುರ್ತಿಸಿರುವಂತೆ ವೆಂಕಟಾಲ ಗ್ರಾಮದ ಕೆರೆ ಸರ್ವೆ ನಂ.39 ಬಫರ್ ಪ್ರದೇಶವಾಗಿದ್ದು, ಸರ್ವೆ ನಂ.34/1 ರಲ್ಲಿ 0-02.08 ಗುಂಟೆ ಮತ್ತು ಸರ್ವೆ ನಂ.34/2 ರಲ್ಲಿ 0-21 ಗುಂಟೆ ವಿಸ್ತೀರ್ಣವು ಬಫರ್ ಪ್ರದೇಶವಾಗಿರುತ್ತದೆ.

**ಸಂಖ್ಯೆ:ಆರ್.ಡಿ. 159 ಎಲ್.ಜಿ.ಕ್ಯೂ. 2025**

**(ಕೃಷ್ಣ ಬೈರೇಗೌಡ)**
**ಕಂದಾಯ ಸಚಿವರು**